ತೋಟಗಾರಿಕಾ ಫಾರ್ಮ್‌ಗಳು.

4228(4561) ಶ್ರೀ ಯು.ಆರ್. ಸಭಾಪತಿ (ಉಡುಪಿ) :— ಮಾನ್ಯ ತೋಟಗಾರಿಕೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ರಾಜ್ಯದಲ್ಲಿರುವ ತೋಟಗಾರಿಕಾ ಫಾರ್ಮ್‌ಗಳ ಸಂಖ್ಯೆ ಎಷ್ಟು?

ಆ) ಈ ಫಾರ್ಮ್‌ಗಳಿಂದ ಸರ್ಕಾರಕ್ಕೆ ಬರುವ ಆದಾಯವೆಷ್ಟು?

ಇ) ಈ ಫಾರ್ಮ್‌ಗಳಿಗೆ ಸರ್ಕಾರ ವಾರ್ಷಿಕ ವೆಚ್ಚ ಮಾಡುವ ಹಣ ಎಷ್ಟು?

ಶ್ರೀ ಅಲ್ಲಂ ವೀರಭದ್ರಪ್ಪ (ತೋಟಗಾರಿಕೆ ರಾಜ್ಯ ಸಚಿವರು) :—

ಅ) 415.

ಆ) 1999-2000ನೇ ಸಾಲಿನ ಒಟ್ಟು ಆದಾಯ ರೂ. 5.60 ಕೋಟಿ.

ಇ) 1999-2000ನೇ ಸಾಲಿನ ಒಟ್ಟು ವೆಚ್ಚ ರೂ. 13.22 ಕೋಟಿ.

ಜಿಲ್ಲಾ ಕೇಂದ್ರ ಕಛೇರಿಗಳು.

4229(4563) ಶ್ರೀ ಸಭಾಪತಿ ಯು.ಆರ್. (ಉಡುಪಿ) :— ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

1. ನೂತನವಾಗಿ ರಚನೆಯಾಗಿರುವ ಏಳು ಜಿಲ್ಲೆಗಳಲ್ಲಿ ಜಿಲ್ಲಾಧಿಕಾರಿಗಳ ಕೇಂದ್ರ ಸ್ಥಾನಗಳಿಗೆ ನಿವೇಶನಗಳನ್ನು ಗುರುತಿಸಲಾಗಿದೆಯೇ? (ಜಿಲ್ಲಾವಾರು ವಿವರ ನೀಡಿ)

2. ಜಿಲ್ಲಾಧಿಕಾರಿಗಳ ಕಛೇರಿ ಹಾಗೂ ಇತರ ಆಡಳಿತ ಕಛೇರಿಗಳ ಕಟ್ಟಡಗಳಿಗಾಗಿ ಸರ್ಕಾರ 1999-2000, 2000-2001ರ ಸಾಲಿನಲ್ಲಿ ಬಿಡುಗಡೆಗೊಳಿಸಿರುವ ಹಣ ಎಷ್ಟು? (ಜಿಲ್ಲಾವಾರು ವಿವರಗಳನ್ನು ನೀಡಿ)

3. ಹೊಸ ಜಿಲ್ಲೆಗಳಿಗೆ ಜಿಲ್ಲಾ ಕೇಂದ್ರ ಆಡಳಿತ ಕಛೇರಿ ಕಟ್ಟಡಗಳನ್ನು ಎಂದು ನಿರ್ಮಿಸಲಾಗುವುದು?

ಶ್ರೀ ಹೆಚ್.ಸಿ. ಶ್ರೀ ಕಂಠಯ್ಯ (ಕಂದಾಯ ಸಚಿವರು) :—

1. ಬಾಗಲಕೋಟ ಜಿಲ್ಲಾ ಕೇಂದ್ರದಲ್ಲಿ ಜಿಲ್ಲಾ ಕಛೇರಿಗಳ ಸಂಕೀರ್ಣ ನಿರ್ಮಾಣಕ್ಕಾಗಿ ನಿವೇಶನವನ್ನು ಗುರುತಿಸಲಾಗಿದೆ. ಉಳಿದ ಹೊಸ ಜಿಲ್ಲೆಗಳಲ್ಲಿ ನಿವೇಶನ ಗುರುತಿಸುವ ಕಾರ್ಯ ಪ್ರಗತಿಯಲ್ಲಿದೆ.